# ✻ ಅದ್ವೈತದಲ್ಲಿ ಮಾಯೆಯ ಸ್ಥಾನ ✻

ಸ್ವಾಮಿ ಸುರೇಶಾನಂದ

ಅದ್ವೈತವನ್ನು ಮಾಯಾವಾದವೆಂದೇ ಟೀಕಿಸುವ ಅನೇಕರು ಅದರ ಎಲ್ಲ ಆಯಾಮಗಳನ್ನೂ ಅಧ್ಯಯನ ಮಾಡಿರಲಾರರು. ಶ್ರೀರಾಮಕೃಷ್ಣರ, ಸ್ವಾಮಿ ವಿವೇಕಾನಂದರ ಅನುಭವವಾಣಿಯನ್ನು ಬಳಸಿಕೊಂಡು ವ್ಯಾವಹಾರಿಕ ಜಗತ್ತಿನ ಅನುಭವಗಳಿಗೆ ಆಧಾರವಾದ ಮಾಯೆಯ ಪರಿಚಯ ಮಾಡಿಕೊಟ್ಟಿರುವ ಪೂಜ್ಯರು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದರು. ಈಗ ಬಿಳಿಗಿರಿರಂಗನ ಬೆಟ್ಟದಲ್ಲಿ ಆಶ್ರಮದ ಕುಟೀರದಲ್ಲಿ ವಾಸವಾಗಿದ್ದಾರೆ.

ಅದ್ವೈತಪರವಾದ ವಾಕ್ಯಗಳು ಉಪನಿಷತ್ತುಗಳಲ್ಲಿ ಅನೇಕ ಕಡೆ ಕಂಡುಬರುತ್ತವೆಯಾದರೂ ಅವನ್ನು ಕ್ರಮವಾಗಿ ಪ್ರತಿಪಾದಿಸಿ, ಅದ್ವೈತ ಸಿದ್ಧಾಂತವನ್ನು ಸ್ಥಾಪಿಸಿ, ಜನತೆಗೆ ಮಾರ್ಗದರ್ಶಕರಾದವರು ಆಚಾರ್ಯ ಶಂಕರರು. ಕಾಲ ಕ್ರಮೇಣ ಆ ಮತಾನುಯಾಯಿಗಳಿಂದ ಇನ್ನೂ ವಿಸ್ತಾರವಾಗಿ, ತರ್ಕಬದ್ಧವಾಗಿ, ಅನೇಕ ಪ್ರಕರಣ ಗ್ರಂಥಗಳ ಮೂಲಕ ಅದ್ವೈತ ಸಿದ್ಧಾಂತವು ಪ್ರತಿಪಾದಿತವಾಗಿದೆ. ಈ ಎಲ್ಲ ಗ್ರಂಥಗಳಿಗೂ ಪ್ರಸ್ಥಾನತ್ರಯ (ಉಪನಿಷತ್ತುಗಳು, ಗೀತೆ, ಬ್ರಹ್ಮಸೂತ್ರ) ಮತ್ತು ಅವುಗಳಿಗೆ ಆಚಾರ್ಯ ಶಂಕರರು ಬರೆದ ಭಾಷ್ಯಗಳೇ ಮುಖ್ಯ ಆಧಾರ (ಪ್ರಮಾಣ).

ಅವತಾರಪುರುಷರುಗಳೇ ಹೇಳಿದ ಮಾತುಗಳ ಬಗ್ಗೆ, ಬರೆದ ಗ್ರಂಥಗಳ ಬಗ್ಗೆ, ಕಾಲಕ್ರಮೇಣ ಜನ ಅದನ್ನು ಸರಿಯಾಗಿ ಗ್ರಹಿಸಲು ಅಸಮರ್ಥರಾದ ಕಾರಣ, ಅನೇಕ ಭಿನ್ನಾಭಿಪ್ರಾಯಗಳೂ, ವಿಪರೀತ ಭಾವನೆಗಳೂ ಉಂಟಾಗುತ್ತವೆ ಎಂದು ನಾವು ಧಾರ್ಮಿಕ ಚರಿತ್ರೆಯನ್ನು ಓದಿದರೆ ತಿಳಿದುಬರುತ್ತದೆ. ಎಲ್ಲ ಅವತಾರಪುರುಷರುಗಳ, ಮತಾಚಾರ್ಯರುಗಳ ಪಾಡೂ ಹೀಗಾಗಿದೆ ಎಂದರೆ ಅತಿಶಯೋಕ್ತಿ ಆಗಲಾರದು. ತಪ್ಪು ಅವರದಲ್ಲ, ಅವರ ಉಪದೇಶಗಳ ಗೂಢಾರ್ಥವನ್ನು ತಿಳಿದುಕೊಳ್ಳಲಾರದ ಜನ ಸಾಮಾನ್ಯರಾದ ನಮ್ಮದು. ಇಂದ್ರಿಯಗಳ ಬಗ್ಗೆ ಇರುವ ಆಸಕ್ತಿಯನ್ನು ಹೋಗಲಾಡಿಸುವುದಕ್ಕಾಗಿ ಭಗವಾನ್ ಬುದ್ಧದೇವನು ಇದೆಲ್ಲವೂ ಕ್ಷಣಿಕ ಎಂದು ಹೇಳಿದರೆ, 'ಕ್ಷಣಿಕ' ಎನ್ನುವ ಶಬ್ದವನ್ನು ಅಕ್ಷರಶಃ ಪ್ರತಿಪಾದಿಸಿ ಕ್ಷಣಿಕವಾದವನ್ನೇ ಅವನ ಅನುಯಾಯಿಗಳು ಸ್ಥಾಪಿಸಿ **ಆಸ್ಥಾನಿವೃತ್ಯರ್ಥಮವಾದಿ ಬೌದ್ಧೈಃ ಗ್ರಾಹಂಗತಾಸ್ತತ್ರ ಕಥಂಚಿದನ್ಯೇ ।** —ಪ್ರಾಪಂಚಿಕ ಆಸಕ್ತಿಯನ್ನು ನಿವಾರಿಸಲು ಬುದ್ಧ ಎಲ್ಲವೂ ಕ್ಷಣಿಕವೆಂದು ಹೇಳಿದರೆ ಅನುಯಾಯಿಗಳು ಕ್ಷಣಿಕವಾದವೆಂಬ ಪಂಥವನ್ನೇ ಸೃಷ್ಟಿಸಿ, ವಾದ ಮಾಡತೊಡಗಿದರು. ಅವನ ಉಪದೇಶದ ತಾತ್ಪರ್ಯವನ್ನೇ ಮೂಲೆಗೊತ್ತಿದರು. ಅಂತೆಯೇ ಶಂಕರಾಚಾರ್ಯರು ಹೇಳಿದ ಜಗನ್ಮಿಥ್ಯಾತ್ವದ ವಿಷಯವಾಗಿ ಅನೇಕ ವಾದವಿವಾದಗಳೂ, ತಪ್ಪು ಅಭಿಪ್ರಾಯಗಳೂ ಉಂಟಾಗಿ ಅವರ ಮಾತಿನ ತಾತ್ಪರ್ಯವೇನಿರಬಹುದೆನ್ನುವುದೇ ನಮಗೆ ತಿಳಿಯದಾಗಿದೆ. ಆದ್ದರಿಂದ ಆಚಾರ್ಯರ



ನಮಾಮಿ ಭಗವತ್ಪಾದಂ ಶಂಕರಂ ಲೋಕಶಂಕರಂ

ವಾಣಿಯೆಂದು ಪ್ರತೀತಿಯಿರುವ **ಬ್ರಹ್ಮಸತ್ಯಂ ಜಗನ್ಮಿಥ್ಯಾ** ಎಂಬುದರ ಸ್ಪಷ್ಟಾರ್ಥವೇನಿರಬಹುದೆಂಬುದು ವಿಚಾರಣೀಯ.

ತ್ರಿಕಾಲದಲ್ಲಿಯೂ (ಭೂತ, ಭವಿಷ್ಯತ್, ವರ್ತಮಾನ) ಅಬಾಧಿತ ಸ್ವರೂಪ ಉಳ್ಳದ್ದು ಸತ್ಯ. ಅಂತಹ ಸತ್ಯವಸ್ತು ಬ್ರಹ್ಮ ಒಂದೇ ಎಂಬುದು ಅದ್ವೈತ ಸಿದ್ಧಾಂತ. ಅದು ಅನಂತವೂ (ದೇಶ, ಕಾಲ, ವಸ್ತುಗಳ ಪರಿಮಿತಿ ಇಲ್ಲದ್ದು) ಹೌದು. ಹಾಗಾದರೆ ಜಗತ್ತಿನ ಪಾಡೇನು ಎಂಬ ಪ್ರಶ್ನೆ ಸ್ವಾಭಾವಿಕವಾಗಿಯೇ ಉಂಟಾಗುತ್ತದೆ. ಬ್ರಹ್ಮವೇ ಜಗತ್ತಾಗಿದೆ ಎಂದರೆ ಬ್ರಹ್ಮದ ಸತ್ಯತ್ವಕ್ಕೆ (ಅಬಾಧಿತ ಸ್ವರೂಪಕ್ಕೆ) ಭಂಗ ಬಂದೀತು. ಬ್ರಹ್ಮಕ್ಕಿಂತ ಬೇರೆ ಎಂದರೆ ಅದರ ಅನಂತತೆಗೆ ಭಂಗ ಬಂದಂತಾಯಿತು. ಬ್ರಹ್ಮಾಭಿನ್ನ ಎಂದರೆ ಈ ವೈವಿಧ್ಯ ತೋರುವುದಾದರೂ ಹೇಗೆ? ಬ್ರಹ್ಮ ಆನಂದಸ್ವರೂಪವೆಂದಾದರೆ ಅದಕ್ಕೆ ಅಭಿನ್ನವಾದ ಈ ಪ್ರಪಂಚ ದುಃಖಾತ್ಮಕವಾಗಿರುವುದಾದರೂ ಹೇಗೆ? ಇದೆಲ್ಲವೂ ಬ್ರಹ್ಮವೇ ಆದರೆ ಇಲ್ಲಿನ ವಸ್ತುಗಳಿಗೆ ನಾಶ

ಬಂದಾಗ ಬ್ರಹ್ಮವೇ ನಾಶವಾಯಿತೆನ್ನಬಹುದೇ? ಇದು ಯಾರಿಗೂ ಸಮ್ಮತವಲ್ಲ. ಹಾಗಾದರೆ ಪ್ರಪಂಚ ಬ್ರಹ್ಮಕ್ಕಿಂತ ಅತ್ಯಂತ ಭಿನ್ನವೂ ಅಲ್ಲ, ಅಭಿನ್ನವೂ ಅಲ್ಲ ಎನ್ನಬೇಕಾಗುತ್ತದೆ. ಅಂತಹ ವಸ್ತುವನ್ನು (ಪ್ರಪಂಚವನ್ನು) ಮಿಥ್ಯೆ ಎಂದೂ, ಅನಿರ್ವಚನೀಯವೆಂದೂ ಹೇಳುತ್ತಾರೆ.

ಈ ಶಬ್ದಗಳನ್ನು ತುಚ್ಛ, ಶೂನ್ಯ ಎಂಬರ್ಥದಲ್ಲಿ ಉಪಯೋಗಿಸಿ ಅದ್ವೈತವಾದವನ್ನು ಖಂಡಿಸುವ ಮತಗಳು ಅನೇಕ. ಅತ್ಯಂತ ಅಸತ್ತಾದ (ಕಾಲತ್ರಯದಲ್ಲೂ ಇಲ್ಲದ) ವಸ್ತುವಿಗೆ ತುಚ್ಛವೆನ್ನುತ್ತಾರೆ. ಉದಾಹರಣೆಗೆ ಮೊಲದ ಕೊಂಬು ಅಥವಾ ಆಕಾಶಕುಸುಮ. ಜಗತ್ತು ತುಚ್ಛವಾದಲ್ಲಿ ಅದು ನಮ್ಮ ಕಣ್ಣಿಗೆ ಕಾಣಿಸದೇ ಹೋಗಬೇಕಿತ್ತು. ಶೂನ್ಯವಾಗಿದ್ದರೂ ಅಂತೆಯೇ. ಆದರೆ ನಮ್ಮ ಅನುಭವ ಹಾಗಿಲ್ಲ. ಜಗತ್ತು ತೋರುತ್ತಿದೆ. ಆದ್ದರಿಂದಲೇ ಅದ್ವೈತದಲ್ಲಿ ಈ ಎರಡು ಪದಗಳನ್ನೂ ಉಪಯೋಗಿಸದೆ 'ಮಿಥ್ಯಾ' ಎಂಬ ಪದವನ್ನು ಉಪಯೋಗಿಸಿದ್ದಾರೆ. ಒಂದು ವಸ್ತು ತನ್ನಲ್ಲಿ ಯಾವ ಬದಲಾವಣೆಯೂ ಇಲ್ಲದೆ ಇನ್ನೊಂದಾಗಿ ಕಂಡಲ್ಲಿ ಆ ಕಾಣತಕ್ಕ ವಸ್ತುವನ್ನು ಮಿಥ್ಯಾ ಎಂದು ಹೇಳಬಹುದು. ಉದಾಹರಣೆಗೆ ಮಬ್ಬುಗತ್ತಲೆಯಲ್ಲಿ ಒಬ್ಬನಿಗೆ ಹಗ್ಗ ಹಾವಾಗಿ ಕಾಣಿಸಬಹುದು. ಅಲ್ಲಿ ಕಾಣತಕ್ಕ ಹಾವನ್ನು ನಾವು ಮಿಥ್ಯಾ ಎಂಬುದಾಗಿ ಹೇಳಬಹುದೇ ವಿನಾ ತುಚ್ಛವೆಂದಾಗಲಿ ಶೂನ್ಯವೆಂದಾಗಲೀ ಹೇಳಲಾಗದು. ಏಕೆಂದರೆ, ಹಾಗೆ ತಪ್ಪಾಗಿ ಗ್ರಹಿಸಿದ ವ್ಯಕ್ತಿಯು ಭಯ, ಆತಂಕಗಳನ್ನು ಅನುಭವಿಸುತ್ತಾನೆ. ಆ ಕ್ಷಣದಲ್ಲಿ ಹಾವು ಇದೆಯೆಂದೇ ಅವನಿಗೆ ಭಾಸವಾಗುತ್ತದೆ. ಕಣ್ಣಿಗೆ ಕಾಣಿಸತಕ್ಕ ಯಾವುದೋ ಒಂದು ವಸ್ತು ಇದೆ. ಅದು ತನ್ನ ನಿಜ ರೂಪದಿಂದ ಕಾಣುತ್ತಿಲ್ಲ. ಆದರೆ ಹಾವಿನ ರೂಪವಾಗಿ ಕಾಣುತ್ತಿದೆ. ಬೆಳಕಿನೊಂದಿಗೆ ಸಮೀಪ ಹೋಗಿ ಅಥವಾ ಇನ್ನೊಬ್ಬರು ಅದು ಹಾವಲ್ಲ, ಹಗ್ಗ ಎಂದು ತಿಳಿಸಿಕೊಟ್ಟಾಗ, ಹಗ್ಗದ ಜ್ಞಾನದಿಂದಾಗಿ ಹಾವಿನ ಸುಳ್ಳು ಗ್ರಹಿಕೆಯ ನಿವೃತ್ತಿಯಾಗುತ್ತದೆ. ಅಲ್ಲಿ ವಾಸ್ತವಿಕವಾಗಿದ್ದುದು ಹಗ್ಗವೇ. ನೋಡುವಾತನಿಗೆ ಹಾವಾಗಿ ಕಂಡಾಗಲೂ, ಅಲ್ಲಿದ್ದುದು ಹಗ್ಗವೇ. ಮಬ್ಬುಗತ್ತಲು ಅಥವಾ ನೋಡುವಾತನ ಕಣ್ಣಿನ ದೋಷ ಇತ್ಯಾದಿಗಳಿಂದ ಅದು ಹಾವಾಗಿ ಕಂಡಿತು. ಎಲ್ಲ ಬದಲಾವಣೆಗಳೂ ನೋಡುವ ಪುರುಷನಲ್ಲುಂಟಾದುವೇ ವಿನಾ ಹಗ್ಗದಲ್ಲಲ್ಲ. ಇದು ಗಮನಾರ್ಹ. ಹಗ್ಗದ ಬಗ್ಗೆ ನೋಡುವಾತನಲ್ಲಿದ್ದ ಅಜ್ಞಾನವೇ ಹಾವಿನ ತೋರಿಕೆಗೆ ಕಾರಣವಾಯಿತು. ಹಗ್ಗ ಹಾವಾಗಲಿಲ್ಲ. ಕಂಡ ಹಾವು ಅತ್ಯಂತ ಅಸತ್ತೂ (ತುಚ್ಛ) ಅಲ್ಲ, ಶೂನ್ಯವೂ ಅಲ್ಲ. ಶೂನ್ಯ ಅಥವಾ ಅಸತ್ತಾಗಿದ್ದಲ್ಲಿ ಹಾವು ಕಾಣಿಸದೇ ಹೋಗಬೇಕಾಗಿತ್ತು.

ಮೇಲಿನ ದೃಷ್ಟಾಂತವನ್ನು ಬ್ರಹ್ಮ-ಜಗತ್ತುಗಳಿಗೆ ಅನ್ವಯಿಸಿದಲ್ಲಿ ಜಗತ್ತು ಮಿಥ್ಯಾ ಎಂಬುದರಲ್ಲಿ ಆಚಾರ್ಯರ ಅಭಿಪ್ರಾಯ ಏನಿರಬಹುದೆಂಬುದು ಸ್ಪಷ್ಟವಾಗುತ್ತದೆ. ಹಗ್ಗದ ಸ್ಥಾನದಲ್ಲಿದ್ದು ಜಗತ್ತಿನಂತೆ ಕಾಣಿಸುತ್ತಿರುವ ವಸ್ತು ಬ್ರಹ್ಮವೇ ಎಂಬುದು ಅವರ ಸಿದ್ಧಾಂತ. ಬ್ರಹ್ಮಜ್ಞಾನವಾದ ಬಳಿಕ ಪ್ರಪಂಚ ಹಾರಿಹೋಗುತ್ತದೆ ಅಥವಾ ಜ್ಞಾನಿಗೆ ಅದು ಕಾಣದೇ ಹೋಗುತ್ತದೆ ಎಂಬುದೇನೂ ಅವರ ಅಭಿಪ್ರಾಯವಲ್ಲ. ಬದಲು ಬ್ರಹ್ಮವೇ ಜಗತ್ತಾಗಿ ಕಾಣುತ್ತಿತ್ತು. ವಾಸ್ತವಿಕವಾಗಿ ಇದ್ದುದು, ಈಗ ಇರುವುದು ಬ್ರಹ್ಮವೇ ಎಂಬ ಅರಿವು ಅವನಿಗುಂಟಾಗುತ್ತದೆ. ದೃಷ್ಟಾಂತದಲ್ಲಿ ಹೇಳಿದಂತೆ, ಉಂಟಾಗತಕ್ಕ ಬದಲಾವಣೆಗಳು ವ್ಯಕ್ತಿಯಲ್ಲಿಯೇ ವಿನಾ ಹೊರಗಡೆಯಲ್ಲಲ್ಲ. ಹಗ್ಗದ ನಿಜಸ್ವರೂಪ ತಿಳಿಯಲು, ಆಪ್ತವಾಕ್ಯ, ಬೆಳಕು, ಸಮೀಪಗಮನ ಇತ್ಯಾದಿಗಳು ಬೇಕಾದಂತೆ ಸಾಧನ ಚತುಷ್ಟಯಗಳ ಅನುಷ್ಠಾನ, ಗುರೂಪದೇಶ, ವಿವಿದಿಷಾ ಸಂನ್ಯಾಸ, ಶ್ರವಣಾದಿಗಳು ಬ್ರಹ್ಮಜ್ಞಾನಕ್ಕೆ ಸಹಾಯಕವಾಗುವುವು ಎಂದಮಾತ್ರಕ್ಕೆ ಬ್ರಹ್ಮಜ್ಞಾನ ತನ್ಮೂಲಕ ಹೊಸದಾಗಿ ಹುಟ್ಟುತ್ತದೆ ಎಂದಲ್ಲ. ಬ್ರಹ್ಮ ನಿತ್ಯಸಿದ್ಧವಾದದ್ದೇ. ಇದೆಲ್ಲವೂ ಬ್ರಹ್ಮದಿಂದ ಬೇರೆಯಾದುದು ಎಂಬ ತಪ್ಪು ತಿಳುವಳಿಕೆ ಅದರಿಂದ ನಿವೃತ್ತಿಯಾಗುತ್ತದೆ. **ದೃಷ್ಟಿಂ ಜ್ಞಾನಮಯೀಂ ಕೃತ್ವಾ ಪಶ್ಯೇತ್ ಬ್ರಹ್ಮಮಯಂ ಜಗತ್।** (ಅಧ್ಯಾತ್ಮ ಸಾಧನಾಬಲದಿಂದ) ದೃಷ್ಟಿಯನ್ನು ಜ್ಞಾನಮಯವನ್ನಾಗಿ ಮಾಡಿ ಜಗತ್ತನ್ನು ಬ್ರಹ್ಮಮಯವಾಗಿ ನೋಡಬೇಕು.

ಜಗತ್ತು ಮಿಥ್ಯಾ ಎಂದಾದರೆ ಅದು ಕಾಣುವುದಾದರೂ ಹೇಗೆ? ಪ್ರತ್ಯಕ್ಷವಾಗಿ ಕಾಣುತ್ತಿರುವುದನ್ನು ಅದಕ್ಕಿಂತ ದುರ್ಬಲವಾದ ಶಬ್ದಪ್ರಮಾಣದಿಂದ ಅಲ್ಲಗಳೆಯಬಹುದೇ? ಇರತಕ್ಕ ವಸ್ತು ಬ್ರಹ್ಮ ಒಂದೇ ಆದರೆ ಅದು ಜಗತ್ತಾಗಿ ತೋರಲು ಕಾರಣವೇನು? ಎಂಬ ಹಲವಾರು ಪ್ರಶ್ನೆಗಳಿಗೆ ಅದ್ವೈತಾಚಾರ್ಯರುಗಳೇ ಯುಕ್ತಿಯುಕ್ತವಾದ ಉತ್ತರಗಳನ್ನು ಕೊಟ್ಟಿದ್ದಾರೆ. ಮೇಲಿನ ವಿಮರ್ಶೆಯಿಂದ ಬ್ರಹ್ಮವೇ (ಅಧಿಷ್ಠಾನ) ಅವಿದ್ಯಾದೆಸೆಯಲ್ಲಿ ಜಗತ್ತಾಗಿ ತೋರುತ್ತದೆ, ಜ್ಞಾನಾನಂತರದಲ್ಲಿ ಬ್ರಹ್ಮವಾಗಿಯೇ ಉಳಿಯುತ್ತದೆ ಎಂದು ತಿಳಿದುಬರುತ್ತದೆ. ಅವಿದ್ಯಾ, ಕಾಮ, ಕರ್ಮವೆಂಬ ಸಂಸಾರದಲ್ಲಿ ತೊಳಲುತ್ತಿರುವ ಮನುಷ್ಯನಿಗೆ ಇದೆಲ್ಲವೂ ಅನಿತ್ಯ, ಈ ಅನಿತ್ಯವಸ್ತುಗಳಿಂದ ನೀನು ನಿತ್ಯಸುಖ ಪಡೆಯಲಾರೆ, ಇದರ ಹಿನ್ನೆಲೆಯಲ್ಲಿ ನಿತ್ಯವಾದ ವಸ್ತುವೊಂದಿದೆ, ಅದನ್ನು ಪಡೆದದ್ದೇ ಆದರೆ ಶಾಶ್ವತವಾದ ಸುಖ ದೊರೆಯಬಲ್ಲುದು ಎಂದು ಹೇಳಿ, ಈ ದೃಶ್ಯಪ್ರಪಂಚದಲ್ಲಿರತಕ್ಕ ಆಸಕ್ತಿಯನ್ನು ಕಳೆದು ಬ್ರಹ್ಮದೆಡೆಗೆ ಜನರನ್ನು ಒಯ್ಯುವುದಕ್ಕಾಗಿ ಬ್ರಹ್ಮ ಒಂದೇ ಸತ್ಯ ಎಂಬುದನ್ನು ಶ್ರುತಿ, ಆಚಾರ್ಯರುಗಳು ಸಾರುತ್ತಿದ್ದಾರೆಯೇ ವಿನಾ ಜಗತ್ತಿನ ಮಿಥ್ಯಾತ್ವವನ್ನು ಸಾಧಿಸುವುದೇ ಅವರ ಮುಖ್ಯೋದ್ದೇಶವಲ್ಲ. ಬ್ರಹ್ಮ ಒಂದೇ ಪರಮಾರ್ಥ ಸತ್ಯವಾದರೆ ಅದಕ್ಕಿಂತ ಭಿನ್ನವಾಗಿ

ಕಂಡ (ಕಂಡರೆ) ಪದಾರ್ಥಗಳು ಮಿಥ್ಯಾ ಆಗಿರಬೇಕೆಂಬುದು ಅರ್ಥಾತ್ ಸಿದ್ಧವಾಗುತ್ತದೆ. ಅದು ಯುಕ್ತಿಯುಕ್ತವೂ ಆಗುತ್ತದೆ. ಜ್ಞಾನಿಗಳ ಅನುಭವವೂ ಹಾಗಿದೆ.

ಪ್ರತ್ಯಕ್ಷಗೋಚರವಾದ ಪದಾರ್ಥಗಳನ್ನು ಅಲ್ಲಗಳೆಯಲು ಸಾಧ್ಯವೆ ಎಂಬ ಆಕ್ಷೇಪಕ್ಕೇನು ಸಮಾಧಾನ? ವಿಷಯಗಳಿಲ್ಲದೆ ಜ್ಞಾನ ಬರುವುದು ಸಾಧ್ಯವಿಲ್ಲ ಎನ್ನುವುದು ಸರ್ವಸಮ್ಮತ. ಆದರೆ ನೋಡುಗನ ಕೆಲವು ಲೋಪದೋಷಗಳಿಂದಾಗಿ ವಸ್ತು ಅನ್ಯಥಾ ತೋರಬಹುದು. ಉದಾಹರಣೆಗೆ ಕಾಮಾಲೆ ರೋಗಿಗೆ ಶಂಖ ಹಳದಿ ಬಣ್ಣದ್ದಾಗಿ ಕಾಣುತ್ತದೆ. ಶಂಖ ಇರುವುದು ವಾಸ್ತವ. ಆದರೆ ಹಳದಿ ಬಣ್ಣದ್ದಲ್ಲ. ಈತನ ಕಣ್ಣಿನ ದೋಷದಿಂದಾಗಿ ಅಲ್ಲಿ ಹಳದಿ ಬಣ್ಣ ಕಂಡಿತು. ಅಂತೆಯೇ ವಾಸ್ತವಿಕವಾಗಿ ಸಚ್ಚಿದಾನಂದರೂಪ ಬ್ರಹ್ಮವೇ ಇರುವುದಾದರೂ ನೋಡುವವನ ಅಜ್ಞಾನದಿಂದಾಗಿ ಅದೇ ನಾಮರೂಪಾತ್ಮಕವಾಗಿ ತೋರುತ್ತದೆ. **ಅಸ್ತಿ ಭಾತಿ ಪ್ರಿಯಂ ರೂಪಂ ನಾಮಚೇತ್ಯಂಶ ಪಂಚಕಂ । ಆದ್ಯಂ ತ್ರಯಂ ಬ್ರಹ್ಮರೂಪಂ ಜಗದ್ರೂಪಂ ತತೋ ದ್ವಯಂ॥** ಸತ್ಯ, ಜ್ಞಾನ, ಆನಂದ, ನಾಮ, ರೂಪಾತ್ಮಕವಾಗಿ ಕಾಣುತ್ತಿರುವುದರಲ್ಲಿ ಮೊದಲ ಮೂರು ಬ್ರಹ್ಮಸ್ವರೂಪ, ಉಳಿದೆರಡು ಜಗದ್ರೂಪ ಎಂಬುದಾಗಿ ಹೇಳುತ್ತಾರೆ. ಇಲ್ಲೂ ಅಜ್ಞಾನದೆಸೆಯಲ್ಲಿ ಐದಂಶಗಳು ಕಂಡು ಜ್ಞಾನಾಂತರದಲ್ಲಿ ನಾಮರೂಪಗಳು ಮಾಯವಾಗುತ್ತವೆಂದಲ್ಲ. ಸತ್ಯಜ್ಞಾನಾನಂದ ರೂಪವಾದ ಬ್ರಹ್ಮ ನಾಮರೂಪಾತ್ಮಕವಾಗಿ ಕಾಣುತ್ತದೆಂಬುದೇ ಅಭಿಪ್ರಾಯ. ಪ್ರತ್ಯಕ್ಷವಾಗಿ ಬಂದ ಜ್ಞಾನ ಯಥಾರ್ಥಜ್ಞಾನವೆಂದೇ ಆಗಲಿ ಅಥವಾ ಪ್ರಮಾತ್ಮಕವಾಗಿಯೇ ಇರಬೇಕೆನ್ನುವ ನಿಯಮವಿಲ್ಲವೆಂದು ಮೇಲಿನ ದೃಷ್ಟಾಂತದಿಂದ ನಮಗೆ ತಿಳಿದುಬರುತ್ತದೆ. ಜ್ಞಾನಾಂತರದಿಂದ ವಸ್ತುವಿನ ನಿಜಸ್ವರೂಪ ಗೊತ್ತಾದಲ್ಲಿ ಮೊದಲು ಕಂಡದ್ದು ಭ್ರಮಾತ್ಮಕವೆಂದು ಸಿದ್ಧವಾಯಿತಲ್ಲವೆ? ಪ್ರತ್ಯಕ್ಷ ಗೋಚರವಾಗುವ ವಿಷಯಗಳಲ್ಲೇ ಈ ರೀತಿ ಭ್ರಮಾತ್ಮಕ ಜ್ಞಾನ ಬರಬಹುದಾದರೆ ಇಂದ್ರಿಯಾತೀತವಾದ, ಅತ್ಯಂತ ಸೂಕ್ಷ್ಮವಾದ ಸದ್ವಸ್ತುವಿನ ವಿಚಾರದಲ್ಲಿ ನಮಗೆ ಸರಿಯಾದ ತಿಳಿವಳಿಕೆ ಇಲ್ಲವೆಂದು ಹೇಳಿದಲ್ಲಿ ಅದನ್ನೇತಕ್ಕೆ ಒಪ್ಪಬಾರದು? ವಿಷಯಗಳಿದ್ದಂತೆ ಜ್ಞಾನ ಉಂಟಾಗಬೇಕೆಂಬುದು ನಿಜ. ಜ್ಞಾನವು ವಸ್ತುತಂತ್ರ, ಪುರುಷತಂತ್ರವಲ್ಲ—ಎಂದರೆ ನಮಗೆ ಬೇಕಾದಂತೆ ಜ್ಞಾನ ಬರುವುದಿಲ್ಲ. ಆದರೆ ಕಾರಣಾಂತರಗಳಿಂದ ತಾತ್ಕಾಲಿಕವಾಗಿ ಅದು ಅನ್ಯಥಾ ತೋರಬಹುದೆಂಬುದು ಮೇಲಿನ ದೃಷ್ಟಾಂತದಿಂದ ವಿದಿತವಾಗುತ್ತದೆ; ಅನುಭವಸಿದ್ಧವೂ ಆಗಿದೆ. ಪ್ರಪಂಚದ ವಿಷಯದಲ್ಲೂ ಅದು ಬ್ರಹ್ಮವೇ ಎನ್ನುವ ಅನುಭವ ಬರುವವರೆಗೆ ಮಾತ್ರ ಶಾಸ್ತ್ರಪ್ರಾಮಾಣ್ಯವನ್ನು ಒಪ್ಪಿಕೊಳ್ಳಬೇಕು. ಜ್ಞಾನ ಬಂದ ಮೇಲೂ ಮಿಥ್ಯಾಪ್ರಪಂಚವೊಂದು ಬ್ರಹ್ಮಕ್ಕಿಂತ ಬೇರೆಯಾಗಿ ಇರುವುದೆಂದು ಅದು ಹೇಳುತ್ತಿಲ್ಲ. ಅನೇಕ ವಿಚಾರಗಳಲ್ಲಿ ನಮಗಿರುವ ತಪ್ಪು ಅಭಿಪ್ರಾಯಗಳನ್ನು, ಇನ್ನೊಬ್ಬರ ಸಹಾಯದಿಂದ, ಇಲ್ಲವೆ ಓದಿ ತಿಳಿದುಕೊಳ್ಳುವುದರಿಂದ, ಸರಿಪಡಿಸಿಕೊಳ್ಳುವುದಾದರೆ ಅತ್ಯಂತ ಸೂಕ್ಷ್ಮವಾದ ಈ ವಿಚಾರದಲ್ಲೇಕೆ ಅದನ್ನು ಅನ್ವಯಿಸಬಾರದು?

> ಸಾಗರದಲ್ಲಿ ಒಂದು ಅಲೆ ಇದೆ ಎಂದು ಭಾವಿಸಿ. ನಾಮರೂಪಗಳ ದೃಷ್ಟಿಯಿಂದ ಮಾತ್ರ ಅಲೆ ಸಾಗರದಿಂದ ಬೇರೆ ಮತ್ತು ಅಲೆ ಇಲ್ಲದೆ ಈ ನಾಮರೂಪಗಳು ಪ್ರತ್ಯೇಕವಾಗಿ ಇರಲಾರವು. ಅಲೆಯೊಂದಿಗೆ ಮಾತ್ರ ಅವು ಇರಬಲ್ಲವು. ಅಲೆ ಇಳಿದಾಗ, ನಾಮರೂಪಗಳೂ ಹೋಗುವುವು. ಆದರೆ ಅದರಲ್ಲಿದ್ದ ನೀರು ಎಲ್ಲಿಯೂ ಹೋಗುವುದಿಲ್ಲ. —ಸ್ವಾಮಿ ವಿವೇಕಾನಂದ

ಹಗ್ಗದಲ್ಲಿ ಕಂಡ ಹಾವಿನಂತೆ ಪ್ರಪಂಚ ಮಿಥ್ಯಾ ಅಥವಾ ಪ್ರಾತಿಭಾಸಿಕವಾದರೆ ಮಿಥ್ಯಾಜಗತ್ತಿನಲ್ಲಿರತಕ್ಕ ನಾವುಗಳು, ಶಾಸ್ತ್ರ, ಗುರೂಪದೇಶ, ಇವೆಲ್ಲವೂ ಮಿಥ್ಯಾ ಆದಂತಾಯಿತು. ಈ ಮಿಥ್ಯಾಸಾಧನಗಳಿಂದ, ಮಿಥ್ಯಾಜೀವನು ಸತ್ಯವಾದ ಬ್ರಹ್ಮವನ್ನು ಪಡೆಯುವುದಾದರೂ ಹೇಗೆ ಎನ್ನುವುದು ಮತ್ತೊಂದು ಆಕ್ಷೇಪ. ಈ ಪ್ರಶ್ನೆಗೆ ಪಾರಿಭಾಷಿಕವಾಗಿ ಉತ್ತರ ಹೇಳುವುದಾದರೆ, 'ಜೀವ'ನ ಜೀವತ್ವ ಅಥವಾ ಸಂಸಾರವನ್ನು ಮಿಥ್ಯಾ ಎಂಬುದಾಗಿ ಹೇಳುತ್ತಾರಲ್ಲದೆ 'ಜೀವ'ನೇ ಮಿಥ್ಯಾ ಎಂದು ಅಭಿಪ್ರಾಯವಲ್ಲ. ಸತ್ಯವಾದ ಬ್ರಹ್ಮವೇ ಅಜ್ಞಾನದಿಂದಾಗಿ 'ಜೀವ'ನಾಗಿ ತೋರುತ್ತಿದ್ದಾನೆ. **ಜೀವೋ ಬ್ರಹ್ಮೈವ ನ ಅಪರಃ** ಎಂಬುದೇ ಸಿದ್ಧಾಂತ. ವಾಸ್ತವಿಕವಾಗಿ ಪರಿಚ್ಛಿನ್ನವಾಗಿರುವ ವಸ್ತು ಯಾವುದೇ ಸಾಧನಾಬಲದಿಂದ ಅಪರಿಚ್ಛಿನ್ನವಾಗಲಾರದು. ಬದಲು ಅಪರಿಚ್ಛಿನ್ನ ವಸ್ತುವೇ ಭ್ರಾಂತಿಯಿಂದ ಪರಿಚ್ಛಿನ್ನವಾಗಿ ಕಂಡಲ್ಲಿ ಆ ಪರಿಚ್ಛಿನ್ನತೆಯನ್ನು ಪ್ರಮಾತ್ಮಕವಾದ ಜ್ಞಾನದಿಂದ ಹೋಗಲಾಡಿಸಬಹುದು. ತತ್ತ್ವಮಸಿ ಮೊದಲಾದ ವಾಕ್ಯಗಳ ಅಭಿಪ್ರಾಯವೂ ಇದೇ. ಅಲ್ಲದೇ ಸಂಸಾರ ಅಥವಾ ಬಂಧವೆಂಬುದು ಪಾರಮಾರ್ಥಿಕ ದೃಷ್ಟಿಯಿಂದ ಮಿಥ್ಯಾ ಆಗಿರುವುದರಿಂದ ಶಾಸ್ತ್ರ ಗುರೂಪದೇಶಗಳಿಂದ ಅದರ ನಿವೃತ್ತಿಯೂ ಆಗಬಹುದು. ಪಾರಮಾರ್ಥಿಕ ದೃಷ್ಟಿಯಿಂದ ಶಾಸ್ತ್ರ, ಗುರು ಇವೂ ಕೂಡ ಮಿಥ್ಯವೇ. ಮುಳ್ಳನ್ನು ಮತ್ತೊಂದು ಮುಳ್ಳಿನಿಂದ ತೆಗೆಯುವಂತೆ ಇದು. ಸ್ವಪ್ನದಲ್ಲಿ ಆಗತಕ್ಕ ಹಸಿವು ನೀರಡಿಕೆಗಳಿಗೆ ಸ್ವಪ್ನದ ಭೋಜನ ಜಲಪಾನಗಳಿಂದಲೇ ನಿವೃತ್ತಿ ಬರುವುದಲ್ಲವೇ? ಬ್ರಹ್ಮಜ್ಞಾನದಿಂದಲೆ ಸಂಸಾರ ನಿವೃತ್ತಿಯಾಗಬೇಕು. ಅಂತಹ ಜ್ಞಾನ (ಬ್ರಹ್ಮ) ನಿತ್ಯಸಿದ್ಧವೂ, ಸ್ವಯಂ ಪ್ರಕಾಶವೂ ಆಗಿರುವುದಾದ್ದರಿಂದ ಅದನ್ನು ಅಧಿಕಾರಿಯಾದವನು ಸ್ವಾನುಭವದಿಂದಲೇ ತಿಳಿದುಕೊಳ್ಳಬೇಕಲ್ಲದೆ ಶಾಸ್ತ್ರ ಪ್ರಮಾಣದಿಂದಲ್ಲ. ವ್ಯವಹಾರ ಕಾಲದಲ್ಲಿ ವ್ಯವಹಾರಾತೀತವಾದ ನಿತ್ಯವಾದ ವಸ್ತುವೊಂದಿದೆ ಎಂದು ಮಾತ್ರ ಶಾಸ್ತ್ರ ತಿಳಿಸಿಕೊಡಬಲ್ಲದು. (ಮುಂದುವರಿಯುವುದು)